**ಸಾಕ್ಷಿಗೆ ದಿನಾಂಕಃ 21-09-2019 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀಸವಾಲು ಃ ವಾದಿ ಪರಃ ಶ್ರೀ.ವಿ ಆರ್ ಎನ್ ವಕೀಲರಿಂದ ಃ**

ನಾನು ಖರೀದಿಸಿದ ನಿವೇಶನ ಸಂಖ್ಯೆಃ 2 ಹಾಗೂ ವಾದಿ ಖರೀದಿಸಿದ ನಿವೇಶನ ಸಂಖೆಃ 3 ಆಗಿರುತ್ತದೆ ಎಂದರೆ ಸರಿ. ಎರಡು ನಿವೇಶನಗಳು ಆಯಾತಾಕಾರದಲ್ಲಿ ಅಂದರೆ ಉದ್ದ ಜಾಸ್ತಿ ಇದ್ದು , ಅಗಲ ಕಡಿಮೆ ಇರುತ್ತದೆ ಎಂದರೆ ಸರಿ. ನಿಡಿ-4 ಮತ್ತು 5 ಪೋಟೋ ನನ್ನ ಸ್ವತ್ತಿಗೆ ಸಂಬಂಧಿಸಿದ ಪೋಟೋ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ-3 ಪೋಟೋದಲ್ಲಿ ಕಾಣಿಸುತ್ತಿರುವ ಪೈಪುಗಳು ನನ್ನ ಮನೆಯಿಂದ ಹೊರಕ್ಕೆ ನೀರನ್ನು ತೆಗೆದುಕೊಂಡು ಹೋಗಲು ಅಳವಡಿಸಿರುವ ಪೈಪುಗಳು ಆಗಿರುತ್ತದೆ. ಆ ರೀತಿ ಯಾವುದೇ ಪೈಪುಗಳನ್ನು ಅಳವಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ-4 ರಲ್ಲಿಕಾಣಿಸುತ್ತಿರುವ ಪೋಟೋದಲ್ಲಿ ಕಾಡು ತರಹ ಇರುತ್ತದೆ ಎಂದರೆ ಸರಿ. ನಿಡಿ-6 ಪೋಟೋದಲ್ಲಿಕಾಣಿಸುತ್ತಿರುವ ಜಾಗ ನಮ್ಮ ಮನೆಯ ಮುಂಭಾಗದ ಜಾಗವಾಗಿರುತ್ತದೆ ಎಂದರೆ ಸರಿ. ಮನೆ ಮುಂಭಾಗದಲ್ಲಿ ನೀರು ಹೋಗಲು ಚರಂಡಿ ನಿರ್ಮಿಸಿಕೊಂಡಿರುತ್ತೇವೆಂದರೆ ಸರಿ. ಅದೇ ರೀತಿ ನಿಡಿ-7 ಮತ್ತು 8 ಪೋಟೋಗಳು ನನ್ನ ಸ್ವತ್ತಿಗೆ ಸಂಬಂಧಿಸಿದ್ದಲ್ಲ ಎಂದರೆ ಸರಿಯಲ್ಲ. ನಿಡಿ-9 ಪೋಟೋದಲ್ಲಿ ಎಡಭಾಗದಲ್ಲಿ ಕಾಣಿಸುತ್ತಿರುವ ಮನೆ ವಾದಿಯವರಿಗೆ ಸೇರಿದ್ದು ಬಲಭಾಗದಲ್ಲಿ ಕಾಣಿಸುತ್ತಿರುವ ಮನೆ ನನ್ನದು. ಎರಡರ ಮಧ್ಯೆ ಇಬ್ಬರಿಗೂ ಸೇರಿದ ಒಂದೇ ಕಾಂಪೌಂಡ್ ಇರುತ್ತದೆ. ಸದರಿ ಕಾಂಪೌಂಡ್ ಹಿಂಭಾಗದಲ್ಲಿ ಅಂತರ ಕಡಿಮೆ ಇದ್ದು, ಮುಂಭಾಗಕ್ಕೆ ಬರುವಷ್ಟರಲ್ಲಿ ವಾದಿಯ ಜಾಗವನ್ನು ಒತ್ತುವರಿ ಮಾಡಿ ಕಾಂಪೌಂಡ್ ನಿರ್ಮಿಸಲಾಗಿರುತ್ತದೆ ಎಂದರೆ ಸರಿಯಲ್ಲ. ನಿಡಿ-10 ಪೋಟೋ ಕೂಡ ನನ್ನ ಜಾಗಕ್ಕೆ ಸೇರಿದ ಪೋಟೋ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮನೆ ನಿರ್ಮಾಣ ಮಾಡುವ ಸಮಯದಲ್ಲಿ ನಮ್ಮ ಮನೆ ನೀರನ್ನು ಬಿಡಲು ಹೊಂಡ ಮಾಡಿ ಪೈಪ್ ಅಳವಡಿಸಿದ್ದೆ ಎಂದರೆ ಸರಿಯಲ್ಲ.

ಸಾಕ್ಷಿದಾರರಿಗೆ ಈಗ ಒಂದು ಪೋಟೋವನ್ನು ತೋರಿಸಲಾಗಿ ಆ ಪೋಟೋದಲ್ಲಿ ಕಾಣಿಸುತ್ತಿರುವ ಮನೆ ತನ್ನದು ಎಂದು ನೋಡಿ ಗುರುತಿಸಿದ್ದು , ಸದರಿ ಪೋಟೋವನ್ನು ನಿಪಿ-28 ಎಂದು ಗುರುತಿಸಲಾಯಿತು. ಸದರಿ ನಿಪಿ-28 ಪೋಟೋದಲ್ಲಿ ಬಲಭಾಗದಲ್ಲಿ ಕಾಣುತ್ತಿರುವ ಕಾಂಪೌಂಡ್ ನನಗೆ ಸೇರಿದ್ದಾಗಿರುತ್ತದೆ ಎಂದರೆ ಸರಿ. ಸದರಿ ಕಾಂಪೌಂಡನ್ನು ನಾನು ಸರಿಯಾಗಿ

ನಿರ್ಮಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರರಿಗೆ ಈಗ ಇನ್ನೊಂದು ಪೋಟೋ ತೋರಿಸಲಾಗಿ ಸದರಿ ಪೋಟೋದಲ್ಲಿ ಕಾಣಿಸುತ್ತಿರುವ ಮನೆ ತೆಕ್ಕೂರು ಕಡೆಯಿಂದ ಕಾಣಿಸುತ್ತಿರುವ ಮನೆ ಪೋಟೋ ಎಂದು ನೋಡಿ ಗುರುತಿಸಿರುತ್ತಾರೆ. ಪೋಟೋವನ್ನು ನಿಪಿ-29 ಎಂದು ಗುರುತಿಸಲಾಯಿತು. ಸದರಿ ನಿಪಿ-29 ಪೋಟೋದಲ್ಲಿ ಕಾಣಿಸುತ್ತಿರುವಾಗೆ ಕಾಂಪೌಂಡನ್ನು ಸರಿಯಾಗಿ ನಿರ್ಮಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಮನೆಯ ಹೊಗೆ ಪೈಪನ್ನು ಕಾಂಪೌಂಡ್ ನಿಂದ ಹೊರಭಾಗಕ್ಕೆ ನಿರ್ಮಿಸಿಕೊಂಡಿರುತ್ತೇನೆಂದರೆ ಸರಿಯಲ್ಲ. ಸಾಕ್ಷಿದಾರರಿಗೆ ಇನ್ನೊಂದು ಪೋಟೋ ತೋರಿಸಲಾಗಿ ಸದರಿ ಪೋಟೋದಲ್ಲಿ ಕಾಣಿಸುತ್ತಿರುವ ಕಾಂಪೌಂಡ್ ನಾನು ಹಾಗೂ ವಾದಿ ಇಬ್ಬರು ಸೇರಿ ನಿರ್ಮಿಸಿಕೊಂಡಿರುತ್ತೇವೆಂದು ನೋಡಿ ಗುರುತಿಸಿರುತ್ತಾರೆ. ಪೋಟೋವನ್ನು ನಿಪಿ-30 ಎಂದು ಗುರುತಿಸಲಾಯಿತು. ಕಾಂಪೌಂಡನ್ನು ಬಾವಿ ಜಾಗವನ್ನು ಅತಿಕ್ರಮಿಸಿ ಕಟ್ಟಿರುತ್ತೇನೆಂದರೆ ಸರಿಯಲ್ಲ. ಸದರಿ ಕಾಂಪೌಂಡನ್ನು ಇಬ್ಬರು ಸೇರಿ ನಿರ್ಮಾಣ ಮಾಡಿರುವುದಿಲ್ಲ ವಾದಿ ಇಲ್ಲದಿದ್ದ ಸಮಯದಲ್ಲಿ ನಾನೇ ಬಾವಿ ಜಾಗವನ್ನು ಅತಿಕ್ರಮಿಸಿಕೊಂಡು ಕಾಂಪೌಂಡ್ ನಿರ್ಮಿಸಿಕೊಂಡಿರುತ್ತೇನೆಂದರೆ ಸರಿಯಲ್ಲ. ವಾದಿ ನಿರ್ಮಿಸಿರುವ ಬಾವಿ ನಾವು ಒಟ್ಟಾಗಿ ನಿರ್ಮಿಸಿರುವ ಕಾಂಪೌಂಡ್ ನಿಂದ ನನ್ನ ಜಾಗದೊಳಗೆ ಒಂದುವರೆ ಅಡಿ ಒಳಗೆ ಬಂದಿರುತ್ತದೆ. ನನ್ನ ಜಾಗದಲ್ಲಿ ಎಲ್ಲೆ ಸಹ ನೀರು ಹೋಗಲು ಹೊಂಡ ಮಾಡಿದರೆ ಬಾವಿಗೆ ಹೋಗುತ್ತದೆ ಎಂದರೆ ಸುಳ್ಳು. ನಾನು ಕಾಂಪೌಂಡ್ ನಿರ್ಮಿಸುವ ಪೂರ್ವದಲ್ಲಿ ವಾದಿ ನಿರ್ಮಿಸಿದ್ದ ಬಾವಿ ತೆರೆದ ಬಾವಿಯಾಗಿತ್ತು ಎಂದರೆ ಸರಿ.

2012 ರಲ್ಲಿ ವಾದಿಯು ದಾವಾಸ್ವತ್ತಿನಲ್ಲಿ ಮನೆ ನಿರ್ಮಿಸಿದ್ದು , 2014 ರಲ್ಲಿ ನಾನು ಖರೀದಿಸಿದ ನಿವೇಶನದಲ್ಲಿ ಮನೆ ನಿರ್ಮಿಸಿರುತ್ತೇನೆಂದರೆ ಸರಿ. ನಮ್ಮ ಮನೆ ಹಿಂಭಾಗದಲ್ಲಿ ಹಾಗೂ ಶಿವಶಂಕರ್ ರವರ ಮನೆ ಹಿಂಭಾಗದಲ್ಲಿ ಶಿವಶಂಕರ್ ರವರ ಮನೆಯ ನೀರು ಹೋಗುತ್ತಿರುತ್ತದೆ ಎಂದರೆ ಸರಿ. ನಾನು ನಮ್ಮ ಮನೆಯ ಕಶ್ಮಲದ ನೀರನ್ನೆಲ್ಲಾ ಚೇಂಬರ್ ಮಾಡಿ ವಾದಿಯ ಬಾವಿಗೆ ನೇರವಾಗಿ ಹೋಗುವಂತೆ ಬಿಟ್ಟಿರುತ್ತೇನೆಂದರೆ ಸರಿಯಲ್ಲ.

ಸಾಕ್ಷಿದಾರರಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಅದರಲ್ಲಿರುವ ಸಹಿ ತಮ್ಮದೇ ಎಂದರೆ ಸಾಕ್ಷಿದಾರರು ದಾಖಲೆ ನೋಡಿ ತನ್ನ ಸಹಿಯನ್ನು ಗುರುತಿಸಿರುತ್ತಾರೆ. ಸಾಕ್ಷಿದಾರರು ದಾಖಲೆಯಲ್ಲಿ ತನ್ನ ಸಹಿಯನ್ನು ಗುರುತಿಸಿದ ಮೇರೆಗೆ ದಾಖಲೆಯನ್ನು ನಿಪಿ-31, ಸಾಕ್ಷಿದಾರರ ಸಹಿಯನ್ನು ನಿಪಿ-31(ಎ) ಎಂದು ಗುರುತಿಸಲಾಯಿತು. ದಿನಾಂಕಃ 30/09/2014 ರಂದು ಮೆಣಸೆ ಗ್ರಾಮ ಪಂಚಾಯಿತಿಯಿಂದ ನನಗೆ ನಿಪಿ-31 ರ ಪ್ರಕಾರ ನೋಟೀಸು ಬಂದಿರುತ್ತದೆ ಎಂದರೆ

ನೆನಪಿಲ್ಲ. ಸದರಿ ನೋಟೀಸು ಬರುವ ಪೂರ್ವದಲ್ಲಿ ನಾನು ಬಾವಿಗೆ ನೀರನ್ನು ಬಿಡುವುದಿಲ್ಲವೆಂದು ಸರಿ ಮಾಡಿಕೊಡುತ್ತೇನೆಂದು ತಿಳಿಸಿದ್ದರೂ ನೀರು ಬಿಡುವುದನ್ನು ನಿಲ್ಲಿಸದೇ ಇರುವ ಕಾರಣ ಪಂಚಾಯಿತಿಯಿಂದ ನೋಟೀಸು ನೀಡಿರುತ್ತಾರೆಂದರೆ ಸರಿಯಲ್ಲ. ನಾನು ಹೇಳಿದಂತೆ ನೀರನ್ನು ಬಿಡುವುದನ್ನು ನಿಲ್ಲಿಸಿರುವುದಿಲ್ಲ ಹಾಗೂ ಕಾಂಪೌಂಡನ್ನು ಸಹ ತೆರವುಗೊಳಿಸಿರುವುದಿಲ್ಲ ಎಂದರೆ ಸರಿಯಲ್ಲ. ಆ ರೀತಿ ಪಂಚಾಯಿತಿಯಿಂದ ನೋಟೀಸು ಬಂದ ನಂತರ ನಾನು ನನ್ನ ವಕೀಲರ ಮೂಲಕ ವಾದಿಗೆ ಸುಳ್ಳು ನೋಟೀಸನ್ನು ಕಳುಹಿಸಿರುತ್ತೇನೆಂದರೆ ಸರಿಯಲ್ಲ.

ನಿಪಿ-13 ರ ಫೋಟೋದಲ್ಲಿ ಕಾಣಿಸುತ್ತಿರುವ ಮನೆ ವಾದಿ ಮನೆ ಎಂದರೆ ಸರಿ. ಸದರಿ ಫೋಟೋದ ಬಲಭಾಗದಲ್ಲಿ ಕಾಣಿಸುತ್ತಿರುವ ಕಾಂಪೌಂಡ್ ನನ್ನ ಹಾಗೂ ವಾದಿಯ ಮನೆಯ ನಡುವೆ ಇರುವ ಕಾಂಪೌಂಡ್ ಆಗಿರುತ್ತದೆ ಎಂದರೆ ಸರಿ. ಸದರಿ ಫೋಟೋದಲ್ಲಿ ಕಾಣಿಸುತ್ತಿರುವ ಕಲ್ಲಿನ ಸ್ಥಳದಲ್ಲಿಯೇ ಬಾವಿ ಇರುತ್ತದೆ ಎಂದರೆ ಸರಿ. ನಿಪಿ-14 ಫೋಟೋದಲ್ಲಿ ಕಾಣಿಸುವಂತೆ ನಾನು ನನ್ನ ಕಾಂಪೌಂಡ್ ಪಕ್ಕದಲ್ಲಿ ಚೇಂಬರ್ ಮಾಡಿ ನಮ್ಮ ಮನೆ ಕೊಳಕು ನೀರನ್ನು ಬಾವಿಗೆ ಹೋಗುವಂತೆ ಹರಿಯಲು ಬಿಟ್ಟಿರುತ್ತೇನೆಂದರೆ ಸರಿಯಲ್ಲ. ಆ ರೀತ್ಯಾ ನಿಪಿ-16 ಮತ್ತು 17 ಫೋಟೋದಲ್ಲಿ ಕಾಣಿಸುವಂತೆ ವಾದಿ ನಿರ್ಮಿಸಿರುವ ಬಾವಿಗೆ ನನ್ನ ಮನೆಯ ಕೊಳಕು ನೀರು ಬೀಳುತ್ತಿರುತ್ತದೆ ಎಂದರೆ ಸುಳ್ಳು ಸಾಕ್ಷಿದಾರರು ಮುಂದುವರೆದು ಸದರಿ ಫೋಟೋವನ್ನು ಸೃಷ್ಟಿ ಮಾಡಿಕೊಂಡು ಹಾಜರುಪಡಿಸಿರುತ್ತಾರೆಂದು ಉತ್ತರಿಸಿರುತ್ತಾರೆ.

ನನ್ನ ಹಾಗೂ ವಾದಿ ನಡುವೆ ದಾವೆ ದಾಖಲು ಮಾಡುವ ಪೂರ್ವದಲ್ಲಿ ಯಾವುದೇ ರೀತಿಯ ದ್ವೇಷ ಇರಲಿಲ್ಲ ಎಂದರೆ ಸರಿ. ನಿಡಿ-1 ಫೋಟೋದಲ್ಲಿ ಕಾಣಿಸುತ್ತಿರುವಾಗೆ ನನ್ನ ಮನೆಯ ಮಾಡಿನ ನೀರು ಹೋಗಲು ಪೈಪನ್ನು ಅಳವಡಿಸಿರುತ್ತೇನೆಂದರೆ ಸರಿ. ಈ ದಾವೆ ಸಲ್ಲಿಸಿದ ನಂತರ ಆ ರೀತಿ ಪೈಪನ್ನು ಅಳವಡಿಸಿ ನೀರು ಹೊರಹೋಗಲು ವ್ಯವಸ್ಥೆ ಮಾಡಿರುತ್ತೇನೆಂದರೆ ಸಾಕ್ಷಿದಾರರು ದಾವೆ ದಾಖಲಿಸುವ ಸಮಯದಲ್ಲಿ ಮನೆ ನಿರ್ಮಾಣ ಪೂರ್ತಿಯಾಗಿರಲಿಲ್ಲ ಪೂರ್ತಿಯಾದ ನಂತರ ಪೈಪನ್ನು ಅಳವಡಿಸಿರುತ್ತೇನೆಂದು ಉತ್ತರಿಸಿರುತ್ತಾರೆ. ಸದರಿ ನಿಡಿ-1 ಫೋಟೋವನ್ನು ಮಾಡಿನ ನೀರನ್ನು ಮನೆ ಹೊರಭಾಗ ಹೋಗುವಂತೆ ವ್ಯವಸ್ಥೆ ಮಾಡಿರುತ್ತೇನೆಂದು ನ್ಯಾಯಾಲಯದಲ್ಲಿ ಬಿಂಬಿಸಲು ನಿಡಿ-1 ಫೋಟೋವನ್ನು ಸೃಷ್ಟಿಸಿಕೊಂಡು ಹಾಜರುಪಡಿಸಿರುತ್ತೇನೆಂದರೆ ಸರಿಯಲ್ಲ. ನನ್ನ ಮನೆಯ

ಕೊಳಕು ನೀರನ್ನು ವಾದಿಯ ಬಾವಿಗೆ ಬಿಟ್ಟು ಬಾವಿಯ ನೀರನ್ನು ಹಾಳು ಮಾಡಿರುತ್ತೇನೆಂದರೆ ಸರಿಯಲ್ಲ.

ಸಾಮಾನ್ಯವಾಗಿ ದೇವರ ಪೂಜೆಗೆ ಯಾರೂ ಸಹ ಬಿಸಿ ನೀರನ್ನು ಉಪಯೋಗಿಸುವುದಿಲ್ಲ ಎಂದರೆ ಸರಿ. ನಾನು ವಾದಿಯ ಬಾವಿಗೆ ಕೊಳಕು ನೀರು ಬಿಟ್ಟಿರುವುದರಿಂದ ವಾದಿ ತಮ್ಮ ದೇವರ ಪೂಜೆ ಹಾಗೂ ದೈನಂದಿನ ಕೆಲಸಗಳಿಗೆ ಬಾವಿಯ ನೀರನ್ನು ಉಪಯೋಗಿಸದಷ್ಟು ಹಾಳಾಗಿರುತ್ತದೆ ಅದಕ್ಕೆ ನಾನೇ ಜವಾಬ್ದಾರನಾಗಿರುತ್ತೇನೆಂದರೆ ಸರಿಯಲ್ಲ. ಬಾವಿಗೆ ಹಾಕಿರುವ ರಿಂಗನ್ನು ನಾನು ಕೊರೆದು ಚೇಂಬರ್ ಮಾಡಿ ಕೊಳಕು ನೀರನ್ನು ಬಿಟ್ಟಿರುತ್ತೇನೆಂದರೆ ಸರಿಯಲ್ಲ. ನಾನು ತಪ್ಪು ಮಾಡಿದ್ದರೂ ನ್ಯಾಯಾಲಯದಲ್ಲಿ ತಪ್ಪು ಮಾಡಿಲ್ಲವೆಂದು ಸುಳ್ಳು ಮುಖ್ಯ ವಿಚಾರಣೆ ಪ್ರಮಾಣಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

:: ಮರು ವಿಚಾರಣೆ ಇಲ್ಲ::

**(ದಿನಾಂಕಃ 21-09-2019 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಎ ಒ**

**ಪ್ರ.ದ.ನ್ಯಾ.ದಂಃ ಶೃಂಗೇರಿ**

**ಸಾಕ್ಷಿ ಸಹಿಃ**